ಶಾಸಕರೂ ಇದ್ದಾರೆ, ಮಾನ್ಯ ಶಾಸಕರಾದ ಶ್ರೀನಿವಾಸ್‌ರವರೂ ಇದ್ದಾರೆ, ಆ ಸಭೆಗೆ ಕಾಡಾದ ಅಧ್ಯಕ್ಷರನ್ನು, ಅಧಿಕಾರಿಗಳನ್ನು ಕರೆಯುತ್ತೇನೆ. ಬೇಕಾದರೆ ಆ ಸಭೆಗೆ ರೈತರ ಪ್ರತಿನಿಧಿಗಳನ್ನೂ ಕರೆಯುತ್ತೇನೆ. ಅಂದರೆ ಇದಕ್ಕಾಗಿ ದೊಡ್ಡ ಜಾತಾ ಬರಬೇಕಾದ ಅವಶ್ಯಕತೆ ಇಲ್ಲ. ಏಕೆಂದರೆ ಈ ಸರ್ಕಾರ ಇರುವುದೇ ರೈತರಿಗೋಸ್ಕರ. ಕೆಲವರ ಹೆಸರುಗಳನ್ನು ಮಾನ್ಯ ಸದಸ್ಯರೇ ಸೂಚಿಸಲಿ ಅವರನ್ನೂ ಸಭೆಗೆ ಕರೆಯುತ್ತೇನೆ ಚರ್ಚೆ ಮಾಡೋಣ. ರೈತರಿಗೆ ಉತ್ತಮವಾದ ಅನುಕೂಲವನ್ನು ಮಾಡಿಕೊಡೋಣ ಎಂಬುದನ್ನು ಈ ಸಂದರ್ಭದಲ್ಲಿ ಹೇಳಂವುದಕ್ಕೆ ನಾನು ಬಯಸುತ್ತೇನೆ.

ವರದಿಯ ಮಂಡನೆ

ಶ್ರೀ ರಮೇಶ್‌ಕುಮಾರ್.—ಮಾನ್ಯ ಅಧ್ಯಕ್ಷರೆ,

"ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ೧೯೭೯-೮೦ರಿಂದ ೧೯೮೨-೮೩ರವರೆಗಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕ ಪತ್ರಗಳ ಮೇಲಿನ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾ ಲೇಖಾ ಪರೀಕ್ಷಕರ ವರದಿಯ (ಸಿವಿಲ್ ಹಾಗೂ ಕಂದಾಯ) ಮೇಲಿನ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ೮೨ನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸದನದ ಮುಂದೆ ಮಂಡನೆ ಮಾಡಲಾಗಿದೆ.

ನಿಯಮ ೩೩೪ರ ಮೇರೆಗೆ

ಭ್ರಷ್ಟಾಚಾರ ಹಾಗೂ ಲಂಚಗುಳಿತನಕ್ಕೆ ಕಾರಣರಾದ ಸುಳ್ಯ ಪೋಲೀಸ್ ಠಾಣೆಯ ಪೋಲೀಸ್ ಕಾನ್‌ಸ್ಟೇಬಲ್‌ಗಳ ಮೇಲೆ ಕ್ರಮ ಕೈಗೊಳ್ಳುವುದು:

ಶ್ರೀ ಕೆ. ಕುಶಾಲ.—ಸುಳ್ಯ ಪೋಲೀಸ್ ಠಾಣೆಯಲ್ಲಿರುವ ಪೋಲೀಸು ಕಾನ್‌ಸ್ಟೇಬಲ್‌ಗಳಿಬ್ಬರು ಕೆಲವು ವರ್ಷಗಳಿಂದ ಆ ಸ್ಟೇಷನ್ನಿನಲ್ಲಿ ಇದ್ದುಕೊಂಡು ಸುಳ್ಯ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆಯುವ ಭ್ರಷ್ಟಾಚಾರ, ಲಂಚಗುಳಿತನದ ಸೂತ್ರಧಾರಿಗಳು ಎಂದು ದಿನ ಪತ್ರಿಕೆಯಲ್ಲಿ ಸಾರ್ವಜನಿಕರು ಹಾಗೂ ಪೋಲೀಸು ಇಲಾಖೆಯವರು ಹೇಳಿಕೆ ನೀಡಿದ್ದರೂ ಈ ತನಕ ಆ ಕಾನ್‌ಸ್ಟೇಬಲ್‌ಗಳ ಮೇಲೆ ಸರ್ಕಾರ ಕ್ರಮ ಕೈಕೊಳ್ಳದೆ ಇರಲು ಕಾರಣವೇನು, ಇನ್ನಾದರೂ ಕ್ರಮ ಕೈಕೊಳ್ಳುವರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಪತ್ರಿಕೆಗಳಲ್ಲಿ ವರದಿ ಬಂದಿದೆ, ಆ ಒಂದು ಆಧಾರದ ಮೇಲೆ ಅವರು ಮಾಡಬಾರದ ಕೆಲಸವನ್ನು ಮಾಡಿದ್ದಾರೆ, ಅವರನ್ನು ಅಲ್ಲಿಂದ ವರ್ಗಾವಣೆಯನ್ನು ಮಾಡಿ ಎಂಬುದಾಗಿ ಹೇಳುತ್ತಿದ್ದಾರೆ ಮಾನ್ಯ ಸದಸ್ಯರು. ಆ ವಿಚಾರವನ್ನು ನಾನು ಮಂತ್ರಿಗಳ ಗಮನಕ್ಕೆ ತಿಳಿಸುತ್ತೇನೆ. ಜೊತೆಗೆ ಈ ವಿಚಾರದಲ್ಲಿ ಅವರದ್ದೇನಾದರೂ ಆಪಾದನೆ ಇದ್ದರೆ, ಸನ್ಮಾನ್ಯ ಸದಸ್ಯರು ಲಿಖಿತ ಮೂಲಕ ಕೊಟ್ಟರೆ ಅದನ್ನು ವಿಚಾರ ಮಾಡಿತಕ್ಕಂತಹ ಕೆಲಸವನ್ನು ಸರ್ಕಾರ ಮಾಡುತ್ತದೆಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಭೂನ್ಯಾಯ ಮಂಡಲಿಗಳ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದು.

ಶ್ರೀ ಬಿ. ವಿ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯ ಭೂ ನ್ಯಾಯ ಮಂಡಳಿಗಳ ಸ್ಪೆಷಲ್ ತಹಸೀಲ್ದಾರ್ ಮತ್ತು ಸಿಬ್ಬಂದಿಯವರು ಪ್ರಕರಣಗಳ ಫೈಲುಗಳನ್ನು ವಿಂಗಡಿಸಿ ನೋಟೀಸು ಕೊಡ್ ವವರಿಗೆ ನೋಟೀಸು ಕೊಟ್ಟು ಫೈಲುಗಳ ಇತ್ಯರ್ಥಕ್ಕೆ ಭೂ ನ್ಯಾಯ ಮಂಡಳಿಗಳಿಗೆ ಒಪ್ಪಿಸುವುದು ನಿಧಾನಗತಿಯಲ್ಲಿದೆ ಎಂಬ ದೂರುಗಳಿವೆ. ಅಂತಿರುವಾಗ ಶೀಘ್ರ ಫೈಲು ಒದಗಿಸುವಂತೆ ಮಾಡಬೇಕು ಇನ್ನು ಭೂ ನ್ಯಾಯ ಮಂಡಳಿಗಳಿಗೆ ಸ್ವಂತ ಜೀಪು ಇಲ್ಲದಿರುವುದರಿಂದ ಸ್ಥಳ ತನಿಖೆಯಂತರ ಪ್ರಮುಖ ಕೆಲಸಕ್ಕೆ ತಹಸೀಲ್ದಾರ್‌ರವರು ಬಿ.ಡಿ.ಓ. ರವರ ಜೀಪು ಸಿಗುವುದನ್ನೇ ಕಾಯಬೇಕಾಗಿರುತ್ತದೆ. ಆದ